ಘಟಪ್ರಭಾ ಬಲದಂಡೆ ಕಾಲುವೆ ಕೆಲಸ

೨೮೬. ಶ್ರೀ ಆರ್.ಎಂ. ಪಾಟೀಲ (ಅರಭಾವಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಘಟಪ್ರಭಾ ಬಲದಂಡೆ ಕಾಲುವೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಯಿತು.

ಆ) ಹಾಗಿದ್ದಲ್ಲಿ ವರ್ಷವಾರು ವೆಚ್ಚ ಮಾಡಲಾದ ಹಣದ ವಿವರ ನೀಡುವುದು.

ಇ) ಈ ಕೆಲಸವನ್ನು ಪೂರ್ಣಗೊಳಿಸಲು ಎಷ್ಟು ವರ್ಷ ಬೇಕಾಗುವುದು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೧೯೭೦–೭೧ ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಆ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹಣಕಾಸಿನ ಲಭ್ಯತೆಯನ್ನು ಅವಲಂಬಿಸಿ ೧೯೯೭ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಅನುಬಂಧ

ವರ್ಷ	ವೆಚ್ಚವಾದ ಹಣ (ಲಕ್ಷ ರೂಪಾಯಿಗಳಲ್ಲಿ)
೧೯೭೦–೭೧	೧.೭೪
೧೯೭೧–೭೨	೨.೭೭
೧೯೭೨–೭೩	೩.೫೮
೧೯೭೩–೭೪	೩.೭೦
೧೯೭೪–೭೫	೭.೨೭
೧೯೭೫–೭೬	೭.೨೯
೧೯೭೬–೭೭	೬೬.೮೨
೧೯೭೭–೭೮	೧೧೧.೫೦
೧೯೭೮–೭೯	೧೨೯.೪೮
೧೯೭೯–೮೦	೪೧.೭೪
೧೯೮೦–೮೧	೧೨೩.೨೫
೧೯೮೧–೮೨	೧೩೪.೫೨
೧೯೮೨–೮೩	೧೯೩.೯೪
೧೯೮೩–೮೪	೨೧೬.೭೮
೧೯೮೪–೮೫	೨೧೭.೧೯
೧೯೮೫–೮೬	೩೪೦.೬೨
೧೯೮೬–೮೭	೩೩೩.೩೦
೧೯೮೭–೮೮	೨೮೨.೩೬
೧೯೮೮–೮೯	೨೭೪.೦೮
ಜನವರಿ ೧೯೯೯ ವರೆಗೆ	ಒಟ್ಟು ೨೪೯೧.೯೩ ಲಕ್ಷಗಳು

ಘಟಪ್ರಭಾ ಎಡದಂಡೆ ಕಾಲುವೆ ಬಕ್ಕಯ್ಯಾ ಔಟ್‌ಲೆಟ್ ಕುರಿತಂ:

೨೮೭. ಶ್ರೀ ಆರ್. ಎಂ. ಪಾಟೀಲ್ (ಅರಭಾವಿ)—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಘಟಪ್ರಭಾ ಎಡದಂಡೆ ನಾಲಾ ಕ್ಷೇತ್ರದಲ್ಲಿ ಬಕ್ಕಯ್ಯ ಔಟ್‌ಲೆಟ್ ಕರ್ನೂಲಿ ಯಾವಾಗ ಪ್ರಾರಂಭಿಸಲಾಯಿತಂ.

ಅ) ಈ ಯೋಜನೆಗೆ ಇಲ್ಲಿಯವರೆಗೂ ವೆಚ್ಚ ಮಾಡಲಾದ ಹಣವೆಷ್ಟು?

ಇ) ಇದರಿಂದ ನೀರಾವರಿ ಯಾಗುವ ಕ್ಷೇತ್ರವೆಷ್ಟು?

ಈ) ಸದರಿ ಯೋಜನೆಯಲ್ಲಿ ಜಮೀನಾನು ಕಳೆದುಕೊಂಡವರಿಗೆ ನೀಡಿರುವ ಪರಿಹಾರದ ಮೊತ್ತ ವೆಷ್ಟು?

ಉ) ಬಕ್ಕಯ್ಯ ಔಟ್‌ಲೆಟ್‌ನಿಂದ ನೀರನ್ನು ಎಂದಿನಿಂದ ಬಿಡಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೧೯೭೬

ಆ) ೧. ೦೩ ಲಕ್ಷ ರೂಪಾಯಿಗಳು.

ಇ) ೪೧೪ ಹೆಕ್ಟೇರು (೧೦೨೨ ಎಕರೆಗಳು)

ಈ) ೧೮,೬೭೬ ರೂಪಾಯಿಗಳು.

ಉ) ಘಟಪ್ರಭಾ ಎಡದಂಡೆ ಕಾಲುವೆಯ ಲೈನಿಂಗ್ ಕೆಲಸ ಪೂರ್ಣವಾದಾಗ ಬಿಡಲಾಗುವುದು.

ಪಿ. ಡಬ್ಲ್ಯೂ. ಡಿ. ಯ ಬೆಂಗಳೂರು ವಿಭಾಗದಲ್ಲಿ ಸಿಮೆಂಟ್ ಕಾಣೆಯಾದ ಬಗ್ಗೆ

೧೭೬. ಶ್ರೀ ಎನ್. ಎಮ್. ಅಡ್ಡಂತಾಯ (ಸೂರತ್ಕಲ್) ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಿ. ಡಬ್ಲ್ಯೂ. ಡಿಯ ಬೆಂಗಳೂರು ವಿಭಾಗದಲ್ಲಿ ೬,೫೩೨ ಚೀಲ ಸಿಮೆಂಟ್ ನವೆಂಬರ್ ೮೮ರಲ್ಲಿ ಕಾಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಿಮೆಂಟ್ ಕೇಂದ್ರ ಉಗ್ರಾಣದಿಂದ ಯಾವ ಉಪವಿಭಾಗಕ್ಕೆ ಸಾಗಿಸಲಾಗಿದೆ?

ಇ) ಈ ಅಕ್ರಮ ನಡೆಸಿದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಸಚಿವರು).—

ಅ) ಪಿ. ಡಬ್ಲ್ಯೂ. ಡಿಯ ಬೆಂಗಳೂರು ವಿಭಾಗದಲ್ಲಿ ಇರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಇಂತಹ ಯಾವ ಪ್ರಕರಣವು ನಡೆದಿರುವುದಿಲ್ಲವೆಂದು ಕಂಡು ಬಂದಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ನೀರಾವರಿ ಯೋಜನೆಗಳು.

೨೩೯. ಶ್ರೀ ಎಂ. ಶಿವಣ್ಣ. (ಹೆಚ್. ಡಿ. ಕೋಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿಯಿಂದ ೧೯೮೮-೮೯ನೇ ಸಾಲಿನಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳು ಎಷ್ಟು? ಇವುಗಳಲ್ಲಿ ಯೋಜನೆ ಮತ್ತು ಯೋಜನೇತರ ಕಾಮಗಾರಿಗಳೆಷ್ಟು?(ವಿವರ ನೀಡುವುದು)

ಆ) ಯೋಜನೇತರ ಕಾಮಗಾರಿಗಳಿಗೆ ಮಂಜೂರಾದ ಹಣ ಮತ್ತು ವೆಚ್ಚ ಮಾಡಲಾದ ಹಣವೆಷ್ಟು?

ಇ) ಯೋಜನೇತರ ಕಾಮಗಾರಿಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಲಾಗಿದೆ? ಹಾಗೂ ಯೋಜನೇತರ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುವ ಹಣ ಎಷ್ಟು?ಮತ್ತು ಖರ್ಚುಮಾಡಲಾಗಿರುವ ಹಣವೆಷ್ಟು?

ಈ) ಈ ತಾಲ್ಲೂಕು ವ್ಯಾಪ್ತಿಯ ಚಾನಲ್‌ಗಳಲ್ಲಿ ಹೂಳು ತೆಗೆಯಲು ಕೊಡಲಾಗಿರುವ ಹಣವೆಷ್ಟು, ಖರ್ಚು ಮಾಡಿರುವ ಹಣವೆಷ್ಟು? (ವಿವರ ನೀಡುವುದು)